ಶ್ರೀ ಸಿ. ಬೈರೇಗೌಡ.— ನಾನು ಅಲ್ಲಿಗೆ ಹೋಗಿರಲಿಲ್ಲ. ಬಾಜಾ ಭಜಂತ್ರಿ ಹಿಡಿದುಕೊಂಡು ಮಂತ್ರಿಗಳನ್ನು ಸ್ವಾಗತ ಮಾಡುವುದಕ್ಕೆ ನಾವು ಹೋಗಲಿಲ್ಲ. ಅಲ್ಲಿ ಭೀಕರ ಪರಿಸ್ಥಿತಿ ಏನಿದೆ, ಜರ್ಜರ ಕಷ್ಟ ಪರಿಸ್ಥಿತಿ ಏನಿದೆ ಎಂಬುದನ್ನು ತೋರಿಸುತ್ತೇನೆ, ಬೇಕಾದರೆ ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಬರಲಿ, ಹೀಗಿರುವಾಗ ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ವಿಷಯವನ್ನು ಹೇಳುವುದು ಸರಿಯಲ್ಲ.

2-00 P.M.

ಶ್ರೀ ಡಿ. ದೇವರಾಜ್ ಅರಸ್.— ಮಾನ್ಯ ಅದಕ್ಷಿಣೀಯವರೇ, ಈಗ ತಾನೇ ಮಾನ್ಯ ಸಚಿವರು ಸರ್ಕಾರದ ವತಿಯಿಂದ ಆಲ್ಲಿ ನಾವು ಕೆಲಸ ಮಾಡಿಸಿದ್ದೇವೆಂದು ಹೇಳಿದರು, ಆದರೆ ಮಾನ್ಯ ಸದಸ್ಯರು ಇಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಅಲ್ಲಿಯ ನೀರನ್ನು ಕುಡಿಯುದಲೇ ಉಪ್ಪಿದೆ, ಸಿಹಿ ಇದೆ ಎಂದು ಹೇಳುತ್ತಿದ್ದಾರೆ. ಆದುದರಿಂದ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು, ಚಾರಿಂಜ್ ಮಾಡುವ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಪುನಃ ಇನ್ನೊಂದು ರಿಪೋರ್ಟ್‌ನ್ನು ತರಸಿ ಹೇಳುತ್ತೇವೆ. ಒಂದೊಂದು ಹಳ್ಳಿಯಲ್ಲ 2-3 ಭಾವಿಗಳು ಇರುತ್ತವೆ ಮತ್ತೆ ಕೆಲವು ಕಡೆ ಭಾವಿಗಳೇ ಇರುವುದಿಲ್ಲ, ಆದುದರಿಂದ ಮೊದಲು ಭಾವಿಗಳೇ ಇಲ್ಲದ ಕಡೆ ಪ್ರಾಮುಖ್ಯತೆ ಕೊಟ್ಟು ಆ ಮೇಲೆ 2-3 ಭಾವಿಗಳನ್ನು ತೆಗಿಸಿ ಕೊಡಿ ಎಂದು ಕೇಳಿದರೆ ಅಂಥ ವರಿಗೆ ಆ ಮೇಲೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಏಕ ಕಾಲದಲ್ಲಿಯೇ ಎಲ್ಲವನ್ನೂ ಮಾಡುವು ದಕ್ಕಾಗುವುದಿಲ್ಲ. 1976-77ನೇ ಸಾಲಿನಲ್ಲಿ 6 ಸಾವಿರಕ್ಕೂ ಮೇಲ್ಪಟ್ಟು ಭಾವಿಗಳನ್ನು ತೆಗೆದಿದ್ದೇವೆ. ಎಲ್ಲ ಭಾವಿಗಳೇ ಇಲ್ಲವೋ ಅಂಥಾ ಕಡೆ ಭಾವಿಗಳನ್ನು ತೆಗೆಸುತ್ತಿರುವುದರಿಂದ ಮಾನ್ಯ ಸದಸ್ಯರು ಸ್ವಲ್ಪ ಸಮಾಧಾನ ಪಟ್ಟುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಗಳ ಇಗ್ನೊರೆನ್ಸ್ ಬಗ್ಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ನಾನು ಕೋಲಾರದಲ್ಲಿ ಕುಡಿಯುವ ನೀರಿನ ಬಗ್ಗೆ ಹೇಳುತ್ತಿದ್ದೇನೆ. 6 ಸಾವಿರ ಬೋರ್‌ವೆಲ್‌ಗಳನ್ನು ಹಳ್ಳಿಗಳಲ್ಲಿ ಏನು ತೆಗಸಿದ್ದಾರೆ ಅದರ ಬಗ್ಗೆ ಹೇಳುತ್ತಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಕೋಲಾರದಲ್ಲಿಯೂ ತೆಗೆಸಿದ್ದೇವೆ.

ಶ್ರೀ ಸಿ. ಬೈರೇಗೌಡ —ಕೋಲಾರದಲ್ಲಿ ತೆಗೆಸಿದ್ದೀರಿ ಅದು ಬೇರೆ ಸ್ಕೀಂ ಆಯಿತು. ಅರ್ಬನ್ ವಾಟರ್ ಸಪ್ಲೈ ಸ್ಕೀಂ ನಿಂದ ಆಗತಕ್ಕಂಥ ಕೆಲಸ ಬೇರೆ, ರೂರಲ್ ವಾಟರ್ ಸಪ್ಲೈ ನಿಂದ ಆಗತಕ್ಕಂಥ ಕೆಲಸವೇ ಬೇರೆ.

ಶ್ರೀ ಡಿ. ದೇವರಾಜ್ ಅರಸ್.—ಇಗ್ನೊರೆನ್ಸ್ ಯಾವುದು ಎನ್ನುವುದ ಪ್ರದರ್ಶನವಾಗುತ್ತಿದೆಯಲ್ಲಾ ಬಿಡಿ.

Eleventh Report of the Committee on Estimates

PRESENTATION

SRI BAPURAO ANANDA RAO (Basava Kalyan).—Madam Speaker, I beg to present Eleventh Report of the Committee on Estimates on Action taken by Government on recommendations contained in the Sixth Report on 'Tourism'.

MADAM SPEAKER.—The Report is presented.